## 18

# ಒಳ್ಳೆಯ ನಾಯಕರಿಗೆ ಗೋಳಾಟದ ಅವಶ್ಯಕತೆ

## (6:3-7)

ಯೆರೂಸಲೇಮಿನ ಸಭೆಯಲ್ಲಿನ ಗ್ರೀಕ ಭಾಷೆಯ ವಿಧವೆಯರು ಈ ಬಿರುಕುಗಳ ಮೂಲಕ ಬಿದ್ದರು. ಒಂದು ವೇಳೆ ಅಪೊಸ್ತಲರು ಈ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸದಿದ್ದರೆ ಅದರ ದುಷ್ಪರಿಣಾಮಗಳು ಅದನ್ನು ವಿಪತ್ತಿಗೆ ನಡೆಸುತ್ತಿದ್ದವು. ನಮ್ಮ ಹಿಂದಿನ ಪಾಠದಲ್ಲಿ, ಸಂದಿಗ್ಧತೆ ಪರಿಸ್ಥಿತಿಗಳಲ್ಲಿ ಒಳ್ಳೆಯ ನಾಯಕರುಗಳು ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ಗಮನಿಸುತ್ತೇವೆ. ನಾವು ಸೂಚಿಸುವುದೇನೆಂದರೆ (1) ಒಳ್ಳೆಯ ನಾಯಕರುಗಳು ಸೂಕ್ಷ್ಮ ಸಂಗತಿಗಳಲ್ಲಿ ತಕ್ಷಣವೇ ಸಮಸ್ಯೆಯನ್ನು ಸೂಕ್ಷ್ಮರೀತಿ ನಿರ್ವಹಿಸುತ್ತಾರೆ, (2) ಒಳ್ಳೆಯ ನಾಯಕರುಗಳು ಸಭೆಯನ್ನು ಕೂಡ ತೊಡಗಿಸಿಕೊಳ್ಳುತ್ತಾರೆ, ಮತ್ತು (3) ಒಳ್ಳೆಯ ನಾಯಕರುಗಳು ಜವಾಬ್ದಾರಿಯನ್ನು ಬೇರೆಬೇರೆಯವರಿಗೆ ಹಂಚಿಕೊಡುತ್ತಾರೆ, ಇನ್ನೂ ಸಭೆಯಲ್ಲಿನ ಅತಿ ದೊಡ್ಡ ಅವಶ್ಯಕತೆಯು ಒಳ್ಳೆಯ ನಾಯಕತ್ವವಾಗಿರುವುದರಿಂದ, ಒಳ್ಳೆಯ ನಾಯಕತ್ವದ ಇತರ ತತ್ವಗಳನ್ನು ನೋಡಲು ಅಪೊಸ್ತಲರ ಕೃತ್ಯಗಳು 6 3ರಿಂದ 7ರ ವಚನಗಳಲ್ಲಿ ಕಂಡುಕೊಳ್ಳುವಾ.

### ಒಳ್ಳೆಯ ನಾಯಕರು ಯೋಗ್ಯ ವ್ಯಕ್ತಿಗಳನ್ನು ಯೋಗ್ಯಕಾರ್ಯಗಳಿಗಾಗಿ ನೇಮಿಸುತ್ತಾರೆ (6:3)

ಒಳ್ಳೆಯ ನಾಯಕರು ಎಲ್ಲ ಕಾರ್ಯಗಳನ್ನು ತಾವೇ ಮಾಡದೇ ಇದ್ದಾಗಲೂ - ಅವರು ನಿರ್ಧಿಷ್ಟವಾದ ವ್ಯಕ್ತಿಗಳಿಗೆ ಜವಾಬ್ದಾರಿಗಳನ್ನು ಕೊಡುವುದರ ಮೂಲಕ ಆ ಕೆಲಸವು ಸಂಪೂರ್ಣಗೊಳ್ಳುವುದರ ಬಗೆಗೆ ಖಚಿತಮಾಡಿಕೊಳ್ಳುತ್ತಾರೆ. "ಎಲ್ಲರ ಕೆಲಸವೆಂದು ಹೇಳಿದಾಗ ಅದನ್ನು ಒಬ್ಬರು ಇನ್ನೊಬ್ಬರ ಮೇಲೆ ಹಾಕುತ್ತಾ ಹೋಗುವುದರಿಂದ ಯಾರೂ ಜವಾಬ್ದಾರಿಯನ್ನು ಹೊರುವುದಿಲ್ಲ" ನಿರ್ಧಿಷ್ಟ ವ್ಯಕ್ತಿಯನ್ನು ನಿರ್ಧಿಷ್ಟ ಕಾರ್ಯಕ್ಕಾಗಿ ನೇಮಿಸಬೇಕು. ಅಪೊಸ್ತಲರು ಸಭೆಯವರಿಗೆ ನಿರ್ಧಿಷ್ಟ ಜನರನ್ನು (ಅವರು ಸಂಖ್ಯೆಯಲ್ಲಿ ಏಳು ಇರಬೇಕು) ನಿರ್ಧಿಷ್ಟವಾದ ಕಾರ್ಯವನ್ನು ನೊಡಿಕೊಳ್ಳಲು (ಊಟೋಪಚಾರ) ಆರಿಸಲು ಸಭೆಗೆ ಹೇಳಿದರು.

ಇದರ ಅರ್ಥವು ಯಾರೋ ಒಬ್ಬನಿಗೆ ಯಾವುದೋ ಒಂದು ಕಾರ್ಯ (task) ಕೊಡಲ್ಪಡಬೇಕೆಂದಲ್ಲ. ಆರಿಸಲ್ಪಟ್ಟವರು *ಆ ಕಾರ್ಯಕ್ಕೆ* ಅರ್ಹತೆಯುಳ್ಳವರಾಗಿರಬೇಕಿತ್ತು. "ಊಟೋಪಚಾರ" ನೋಡಿಕೊಳ್ಳುವವರಿಗೆ ಅವಶ್ಯವಿರುವ ಅರ್ಹತೆಗಳು ಯಾವವು? ಅವರು ಒಳ್ಳೆಯ ಅಡಿಗೆಯವರಾಗಿರುವದು ಅವಷ್ಯವಿತ್ತಾ? ಅವರು ಭಾರಿ ಪ್ರಮಾಣದ ಧವಸಧಾನ್ಯಗಳನ್ನು ಹೊತ್ತುಕೊಳ್ಳುವುದಕ್ಕಾಗಿ ಬಲಶಾಲಿಗಳಾಗಿರಬೇಕಿತ್ತಾ? ಹೀಗೆ ಅವರು ಪರಿಣಿತನಾದ ಮಾಣಿಯಂತೆ ಮೂರು ಅಥವಾ ನಾಲ್ಕು ಊಟದ ತಟ್ಟೆಗಳನ್ನು ಒಬ್ಬರೆ ಕೈಯಲ್ಲಿ ಹೊತ್ತೊಯ್ಯುವ ಕೌಶಲವುಳ್ಳವರಾಗಿರಬೇಕಿತ್ತಾ? ಏನೇ ಆಗಲಿ, ಇದು "ಊಟೋಪಚಾರದ" ಬಗೆಗೆ ಎಲ್ಲವೂ ಅಲ್ಲ ಎಂದು ನಾವು ಬಲ್ಲವರಾಗಿದ್ದೇವೆ. ("ಊಟೋಪಚಾರ" ಇದೊಂದು ರೂಪಕವಾಗಿದ್ದು ಮೇಜಿನ ಮೇಲೆ ಆಹಾರವನ್ನು ಇಡುವುದನ್ನು ಅದು ಸೂಚಿಸುವುದಾಗಿದ್ದು "ಅವಳು ಒಳ್ಳೆಯ ರೀತಿಯಲ್ಲಿ ಆಹಾರವನ್ನು ಇಡುತ್ತಿದ್ದಳು" ಎಂಬಂತೆ ಬಳಿಕೆಯಾಗಿದೆ. "ಆಹಾರದ ಮೇಜು" ಇದು "ದಿನಂಪ್ರತಿ ಪೂರೈಸುವ *ಆಹಾರವನ್ನು*" ಸೂಚಿಸುವಂತದಾಗಿತ್ತು [ವಚನ 1].) ಈ ಕಾರ್ಯದಲ್ಲಿ ತಮ್ಮನ್ನು

ತೊಡಗಿಸಿಕೊಂಡವರಿಗೆ ಇದು ಭೌತಿಕ ಚಟುವಟಿಕೆಯಿಂದ ಕೂಡಿದ್ದಾಗಿದ್ದರೂ ಇಲ್ಲಿ ಒತ್ತಿ ಹೇಳಲಾದ ಅರ್ಹತೆಗಳು ಹೊರಗಿನವುಗಳಲ್ಲ, ಆದರೆ ಒಳಗಿನವುಗಳೇ - ಭೌತಿಕವಾದವುಗಳಲ್ಲ ಆತ್ಮೀಕವಾದವುಗಳೇ ಆಗಿವೆ.

ಆಯ್ಕೆಗಾಗಿನ ಮೊದಲ ಅರ್ಹತೆಯು ಅವರು *ಪುರುಷರಾಗಿ*ಬೇಕು ಹೊರತು ಸ್ತ್ರೀಯರಲ್ಲ ದೇವರ ಯೋಜನೆಯಲ್ಲಿ ಯಾವಾಗಲೂ *ಪುರುಷನು* ಸಭೆಯ ನಾಯಕತ್ವದ ಸ್ಥಾನವನ್ನು ವಹಿಸಿಕೊಳ್ಳುವುದಾಗಿದೆ.[1]

ಎರಡನೆಯ ಅರ್ಹತೆಯು ಈ ಪುರುಷರು *ದಾಸನ* ಹೃದಯವನ್ನು ಹೊಂದಿರುವದು ಅವಶ್ಯವಿತ್ತು: ಅವರು "ಊಟೋಪಚಾರದ ಸೇವೆಗೆ" ಜವಾಬ್ದಾರರಾಗಿರುತ್ತಿದ್ದರು; ಅವರು *"ಉಪಚಾರ"* ಮಾಡಬೇಕಾಗಿತ್ತು. "ಸೇವೆಮಾಡುವದು" ಮತ್ತು "ಸೇವೆ" ಇವು ಡಯಾಕೊನ್ಸ ಎಂಬುದರ ಕ್ರಿಯಾಪದದ ರೂಪದ ಭಾಷಾಂತರವಾಗಿದೆ, "ದಾಸ" ಎಂಬುದಕ್ಕೆ ಇರುವ ಪದವು *"ಡೀಕನ್"* ಎಂಬ ಪದದಿಂದ ಬಂದುದಾಗಿದೆ.

ಈ ಎಲ್ಲ ವರ್ಷಗಳುದ್ದಕ್ಕೂ ಉದ್ಭವಿಸಿದ ಚರ್ಚೆಯು "ಅವರೇ ಮೊದಲ ಡೀಕನ್ನರು" ಹೌದೋ ಅಲ್ಲವೋ ಎಂಬುದೇ ಆಗಿದೆ. ಎರಡು ಕಡೆಯಲ್ಲಿನ ವಿಚಾರಗಳು ಕೂಡಾ ಒಳ್ಳೆಯ ಪರಿಶೀಲನೆಯಾಗಿದೆ. ಒಂದೆಡೆಯಲ್ಲಿ "ಡೀಕನ" ಕ್ರಿಯಾಪದದ ರೂಪದಲ್ಲಿ ಬಳಸಲ್ಪಟ್ಟಿದ್ದು ಮತ್ತು ಅದು ಒಂದು ವೇಳೆ ಈ ಮನುಷ್ಯರು ಡಿಕನ್ನರಲ್ಲದಿದ್ದರೆ, ಡಿಕನ್ನರಿಗೆ ನೇಮಿಸಲಾದ ನಿರ್ಧಿಷ್ಟ ಕಾರ್ಯಗಳನ್ನು ಸೂಚಿಸುವ ಬೇರೆ ಯಾವ ಪರಿಚ್ಛೇದವನ್ನೂ ನಾವು ಹೊಂದಿಲ್ಲ. ಇನ್ನೊಂದೆಡೆಯಲ್ಲಿನ ಟಿಪ್ಪಣಿಯು ಈ ಮನುಷ್ಯರನ್ನು "ಡೀಕನ್ನರು"[2] ಎಂದು ಸೂಚಿಸುವುದಿಲ್ಲ, ಮತ್ತು ಅವರ ಅರ್ಹತೆಗಳು ಆ ಡಿಕನ್ನರಿಗಿರುವ ಅದೇ ಅರ್ಹತೆಗಳಲ್ಲ (1 ತಿಮೊಥೆ 3:8-13).[3] ಮುಂದೆ, ಈ ಬದಿಯ ಪ್ರಶ್ನೆಯು ಹಿರಿಯರಿಲ್ಲದೇ ಡೀಕನ್ನರ "ಸ್ಥಾನವನ್ನು" ನಾವು ಹೊಂದಿದ್ದೇವೆಯಾ ಎಂಬುದು ಆಗಿದೆ (ಫಿಲಿಪ್ಪಿ 1:1; 1 ತಿಮೊಥೆ 3:1, 8).[4] ಇದು ಬಹುಶಃ ಅಪೊಸ್ತಲರ ಕೃತ್ಯಗಳು 6ರಲ್ಲಿನ ವ್ಯವಸ್ಥೆಯು *ವಿಶೇಶ* ವ್ಯವಸ್ಥೆಯಾಗಿದೆ ಎಂದು ಯೋಚಿಸುವಂತದ್ದಾಗಿದ್ದು - ಹನ್ನೆರಡು ಜನರು (6:2) "ಏಳು ಜನರಿಂದ" (21:8) ಸಹಾಯಿಸಲ್ಪಡುತ್ತಿದ್ದರು - ಈ ತತ್ಕಾಲಿಕ ವ್ಯವಸ್ಥೆಯು ನಂತರದಲ್ಲಿ ಹಿರಿಯರ ಮತ್ತು ಡೀಕನ್ನರನ್ನು ಹೊಂದುವ ಶಾಶ್ವತವ್ಯವಸ್ಥೆಗೆ ಬದಲಾವಣೆಗೊಂಡಿತು (ಅಪೊಸ್ತಲರ ಕೃತ್ಯಗಳು 11:30; 14:23; ಫಿಲಿಪ್ಪಿ 1:1). ಆ ಏಳು ಜನರನ್ನು ನಾವು ಡೀಕನ್ನರ ಮುಂದೂತರೆಂದು *ಪರಿಗಣಿಸಬಹುದು.* ನಾವು ಡೀಕನ್ನರ ಕಾರ್ಯದ ಬಗೆಗೆ ಇನ್ನೂ ಹೆಚ್ಚಾಗಿ ಈ ಪರಿಚ್ಛೇದದಲ್ಲಿ ತಿಳಿದುಕೊಳ್ಳಬಹುದು.[5]

ಮೂರನೆಯದಾಗಿ, ಈ ಪುರುಷ ಸೇವಕರಿಗೆ ಕೆಲವು ನಿಶ್ಚಿತವಾದ *ಆತ್ಮೀಕ* ಅರ್ಹತೆಗಳ ಅವಶ್ಯಕತೆಯಿದೆ. ಅವರು ಸನ್ಮಾನಕ್ಕೆ ಯೋಗ್ಯರು ಆತ್ಮನಿಂದ ತುಂಬಿದವರು ಮತ್ತು ವಿವೇಕಿಗಳೂ ಆಗಿರಬೇಕಿತ್ತು. "ಸನ್ಮಾನಕ್ಕೆ ಯೋಗ್ಯರು" ಇದರ ಅರ್ಥವು ಸಮಾಜದ ಎಲ್ಲ ವರ್ಗದವರಿಂದ (ವಿಶೇಷವಾಗಿ ಕ್ರೈಸ್ತ ಸಮುದಾಯದವರಿಂದ) ಕುಲಗಳಿಂದ ಅವರು ಗೌರವಿಸಲ್ಪಟ್ಟವರಾಗಿದ್ದರು. ಅವರು ಕಾರ್ಯಕ್ಕಾಗಿ ಹೋಗುವಾಗ ಅವರು ಯೇಸುಕ್ರಿಸ್ತನನ್ನೂ ಮತ್ತು ಸಭೆಯನ್ನೂ ಪ್ರತಿನಿಧಿಸುತ್ತಿರುವುದರಿಂದ, ಅವರು ಸನ್ಮಾನಕ್ಕೆ ಯೋಗ್ಯರಾಗಿರುವುದು ಅವಶ್ಯವಿತ್ತು. ಒಬ್ಬನ ಜೀವನ ಏನಾಗಿರಬೇಕಿತ್ತೋ ಅದು ಆಗದಿರುವ ಪಕ್ಷದಲ್ಲಿ ಸಭೆಯಲ್ಲಿ "ಹೆಚ್ಚಿನ ಜವಾಬ್ದಾರಿಯು"[6] ಅವನಿಗೆ ಕೊಡಕೂಡದು.[7]

"ಆತ್ಮನಿಂದ ತುಂಬಿಸಲ್ಪಟ್ಟವರು" ಇದರ ಅರ್ಥವು "ಆತ್ಮನ ನಿಯಂತ್ರಣದಲ್ಲಿರುವದು" ಎಂದು. ಈ ವಿಷಯದಲ್ಲಿ, ಇದು ಅದ್ಭುತೀಯ ಸಾಮರ್ಥಗಳನ್ನು ಹೊಂದಿರುವುದನ್ನು ಸೂಚಿಸುವುದಿಲ್ಲ,[8] ಈ ಅರ್ಹತೆಯು ವೈಯಕ್ತಿಕವಾಗಿ ಅಗಣಿತವಾದ ಆತ್ಮೀಕ ಪ್ರೌಢತೆಯನ್ನು ಪಡೆದುಕೊಂಡಿರುದನ್ನು ಸೂಚಿಸುತ್ತದೆ. ಆಯ್ಕೆಯಾದವರೆಲ್ಲ ಪರಿಶುದ್ದಾತ್ಮನ ಸ್ನಾನದ ವರವನ್ನು ಪಡೆದರು (ಅಪೊಸ್ತಲರ ಕೃತ್ಯಗಳು 2:38). ನಿರಂತರವಾಗಿ ಅವರು ಆತ್ಮನಿಂದ

ಪ್ರೇರೇಪಿಸಲ್ಪಟ್ಟ ವಾಕ್ಯವನ್ನು ಕೇಳಿದರು ಮತ್ತು ಅದಕ್ಕೆ ವಿಧೇಯರಾದರು, ಅವರು ಆತ್ಮನ ನಿಯಂತ್ರಣಕ್ಕೆ ತಮ್ಮ ಜೀವಿತವನ್ನು ಒಪ್ಪಿಸಿಕೊಟ್ಟರು. ಇದರ ಪರಿಣಾಮವಾಗಿ, ಅವರಲ್ಲಿ ಪ್ರೀತಿ ಸಂತೋಷ, ಶಾಂತಿ, ತಾಳ್ಮೆ, ಕರುಣೆ, ಒಳ್ಳೆಯತನ, ನಂಬಿಗಸ್ತತನ, ಸಭ್ಯತೆ, ಸ್ವನಿಯಂತ್ರಣ ಮುಂತಾದ "ಆತ್ಮನ ಫಲಗಳು" ಉತ್ಪಾದಿಸಲ್ಪಟ್ಟವು (ಗಲಾತ್ಯ 5:22, 23).[10]

"ವಿವೇಕವು" ಒಪ್ಪಿಸಿಲ್ಪಟ್ಟ ಕಾರ್ಯವನ್ನು (task) ಮಾಡಲು ಅವಶ್ಯವಿರುವ ಪ್ರಾಯೋಗಿಕ ಅರ್ಹತೆಯಾಗಿದೆ. ನೂರಾರು, ಬಹುಶಃ ಸಾವಿರಾರು ಜನರ ಅವಶ್ಯಕತೆಯನ್ನು ನೋಡಿಕೊಳ್ಳುವಿಕೆಗೆ ಒಳ್ಳೆಯ ನ್ಯಾಯ ನಿರ್ಣಯದ ವ್ಯಕ್ತಿಗಳ ಮತ್ತು ಸಾಮಾನ್ಯ ಜ್ಞಾನದ ಅವಶ್ಯಕತೆಯು ಇದೆ. ವಿಶ್ವಾಸರ್ಹರಾದ, ಕೆಲಸವನ್ನು ಮಾಡಿಸಿಕೊಳ್ಳಲು ಸಮರ್ಥರಿರುವ ಜನರು, ಆಯ್ಕೆಹೊಂದಬೇಕಾಗಿತ್ತು.

ಈ ಅರ್ಹತೆಗಳನ್ನು ತಿರುಗಿ ಮನನಮಾಡಿರಿ: ಸನ್ಮಾನಕ್ಕೆ ಯೋಗ್ಯರಾದವರು, ಪರಿಶುದ್ಧಾತ್ಮನಿಂದ ತುಂಬಿರುವದು ಮತ್ತು ವಿವೇಕ. ಇವುಗಳನ್ನು ಡೀಕನ್ನರ ವಿಶೇಷ ಅರ್ಹತೆಗಳಂತೆ ಯೋಚಿಸುವುದಕ್ಕೆ ಬದಲಾಗಿ ಬೋಧಕರಿಗಾಗಲಿ, ಹಿರಿಯರಿಗಾಗಲಿ, ಡೀಕನ್ನರಿಗಾಗಲಿ, ಬೈಬಲ್ ಕ್ಲಾಸ ಶಿಕ್ಷಕರಿಗಾಗಲಿ, ಸಭೆಯ ಖಜಾಂಚಿಗಾಗಲಿ ಅಥವಾ ಚರ್ಚಿನ ಕಟ್ಟಡವನ್ನು ಶುದ್ಧಮಾಡುವವನಿಗಾಗಲೀ ಹೀಗೆ ನಾವು ಸಭೆಯ ಪ್ರತಿಯೊಬ್ಬ ಸೇವಕರಿಗೂ ಇರಬೇಕಾದ ಈ ಅರ್ಹತೆಗಳ ಅವಶ್ಯಕತೆಯನ್ನು ಅರ್ಥಮಾಡಿಕೊಳ್ಳಬೇಕು![11] ನಿನಗೆ ಯಾವುದೇ ಜವಾಬ್ದಾರಿಕೆಗಳು ಕೊಡಲ್ಪಡಲಿ, ನೀನು ಸನ್ಮಾನಕ್ಕೆ ಯೋಗ್ಯನಾಗಿರಬೇಕು (ಒಳ್ಳೆಯ ಹೆಸರನ್ನು ಇಟ್ಟಿಕೊಂಡವರು); ಕ್ರೈಸ್ತನಾಗಿ ಬೆಳೆಯುವದು, ದೇವರಿಗೆ ನಿನ್ನ ಜೀವಿತದಲ್ಲಿ ಕಾರ್ಯಮಾಡುವುದಕ್ಕೆ ಎಡೆಮಾಡಿಕೊಡುವದು ಅವಶ್ಯವಿದೆ; ಒಳ್ಳೆಯ ವಿಚಾರವನ್ನು ಹೊಂದಿದ ಅವನ ಅಥವಾ ಅವಳ ಜವಾಬ್ದಾರಿಯನ್ನು ಪರಿಣಾಮಕಾರಿಯಾದ ರೀತಿಯಲ್ಲಿ ನಿರ್ವಹಿಸುವ ವ್ಯಕ್ತಿಯಾಗಿರುವದು ನಿನಗೆ ಅವಶ್ಯವಿದೆ!

## ಒಳ್ಳೆಯ ನಾಯಕರುಗಳು ನಿಯೋಜಿಸಿದ ಕಾರ್ಯದ ಮಹತ್ವವನ್ನು ಒತ್ತಿ ಹೇಳುತ್ತಾರೆ (6:4)

ನಾಯಕರು ಯೋಗ್ಯ ಕೆಲಸಕ್ಕಾಗಿ ಯೋಗ್ಯ ವ್ಯಕ್ತಿಗಳನ್ನು ಹುಡುಕಲು ಆರಂಭಿಸಿದಾಗ ಅವರು ಮಾಡಲ್ಪಡಬೇಕಾದ ಕಾರ್ಯವು (task) ಮಹತ್ವವೆಂಬುದರ ಬಗ್ಗೆ ಸ್ಪಷ್ಟಪಡಿಕೊಳ್ಳುತ್ತಾರೆ. ಕೆಲ ಸಾರಿ "ನಮ್ಮನ್ನು ನಾವು ಪ್ರಾರ್ಥನೆಯಲ್ಲಿಯೂ ವಾಕ್ಯೋಪದೇಶ ಮಾಡುವಲ್ಲಿಯೂ ನಿರತರಾಗಿಸಿಕೊಳ್ಳುವೆವು" ಎಂಬ ಅಪೊಸ್ತಲರ ಮಾತುಗಳು ಊಟೋಪಚಾರದ ಕಾರ್ಯವು ಇವುಗಳಿಗಿಂತ ಕನಿಷ್ಟವಾದ ಕಾರ್ಯ (task) ಎಂದು ಸೂಚಿಸಿತ್ತಾಇತ್ತು. ಆದರೆ ಇದು ಆ ಹನ್ನೆರಡು ಮಂದಿಯ ವಿಚಾರವಾಗಿರಲಿಲ್ಲ. ಸಭೆಯ ವಿಷೇಶವಾದ ಕೂಟವನ್ನು ಕರೆದು, ಏಳು ಜನರನ್ನು ಆಯ್ಕೆ ಮಾಡುವ ವ್ಯವಸ್ಥೆಯ ನಿಜಾಂಶವೇ ಮೇಜಿನ ಸೇವೆಯು ಅವರ ದೃಷ್ಟಿಯಲ್ಲಿ ಮಹತ್ವದ್ದಾಗಿದೆ ಎಂದು ನಮಗೆ ಸಾಬೀತುಪಡಿಸುತ್ತದೆ.

ಕೊರತೆಯುಳ್ಳವರಿಗೆ ಮತ್ತು ವಿಧವೆಯರಿಗೆ ಆಹಾರವನ್ನು ಒದಗಿಸುವುದರ ಮಹತ್ವವು ಹೊಸ ಒಡಂಬಡಿಕೆಯಲ್ಲಿ ಒತ್ತಿಹೇಳಲ್ಪಟ್ಟಂತಹ ವಿಚಾರವಾಗಿದೆ. ನ್ಯಾಯತೀರ್ಪಿನ ದಿನದಲ್ಲಿ, ಯೇಸುವು ಹೀಗೆ ಹೇಳಬಹುದು "ಬನ್ನಿರಿ, ನೀವು ನನ್ನ ತಂದೆಯಿಂದ ಆಶೀರ್ವಾದ ಹೊಂದಿದವರು, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು ನನಗೆ ಕುಡಿಯುವುದಕ್ಕೆ ಕೊಟ್ಟಿರಿ" (ಮತ್ತಾಯ 25:34, 35). ಯಾಕೋಬನು ಒತ್ತಿ ಹೇಳುವದೇನೆಂದರೆ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಂಬರಿಸಿದವನು ದೇವರ ದೃಷ್ಟಿಯಲ್ಲಿ ಶುದ್ಧನೂ ನಿರ್ಮಲನೂ ಆಗಿದ್ದಾನೆ (ಯಾಕೋಬ 1:27).

ಕ್ರಿಸ್ತನ ಕಾರ್ಯದಲ್ಲಿ "ಚಿಕ್ಕ" ಕಾರ್ಯ ಮತ್ತು "ದೊಡ್ಡ" ಕಾರ್ಯ ಎಂದೇನೂ ಇಲ್ಲ;

ಅಲ್ಲಿ ಯಾವುದು "ಮಹತ್ವ" ಅಥವಾ "ಮಹತ್ವವಿಲ್ಲದ್ದು" ಕಾರ್ಯಗಳು ಎಂದೇನೂ ಇಲ್ಲ. "... *ಯಾವನಾದರೂ ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವುದಕ್ಕೆ* ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 10:42; ಒತ್ತಿ ಹೇಳಿದ್ದು ನನ್ನದು). ನೀವು ದೇವರಿಗೂ ಮತ್ತು ಮನುಷ್ಯರಿಗೂ ಸೇವೆ ಮಾಡುವುದಾದರೆ, ಅದು ಅರ್ಥಪೂರ್ಣವಾಗಿರುತ್ತದೆ!

ದೇವರ ವಾಕ್ಯದ ಸಾರುವಿಕೆಯ ಸೇವೆ ಮತ್ತು ಪ್ರಾರ್ಥನೆ ಎರಡೂ ಮಹತ್ವದ್ದು ಎಂಬುದು ನಿಜವೇ; ಆತ್ಮಗಳು ರಕ್ಷಿಸಲ್ಪಡಬೇಕಾದಲ್ಲಿ ಈ ಎರಡೂ ಸೇವೆಗಳು ಅವಶ್ಯಕವಾದವುಗಳು ಆಗಿವೆ. ಹೇಗೋ, ನಮಗೂ ಸಹ "ಸೇವೆ ಮಾಡುವ ಮೇಜು (ಉಪಚಾರ)" ಮತ್ತು ಅದಕ್ಕೆ ಹೊಂದಿಕೆಯಾದ ಇತರ ಜವಾಬ್ದಾರಿಕೆಗಳು ಕೂಡಾ ಅದರಷ್ಟೇ ಮಹತ್ವದ್ದಾಗಿವೆ ಎಂದು ತಿಳಿಯುವುದು ಅವಶ್ಯವಿದೆ. ಕಳೆದ ರವಿವಾರ ನಾನು ಅರ್ಕನಾನದ ಜೂಡಸೋನಿಯಾದಲ್ಲಿನ ಸಭೆಯಲ್ಲಿ ನಾನೂ ಬೋಧಿಸಿದೆನು. ಒಬ್ಬ ಮನುಷ್ಯನು ಹಾಡುಗಳನ್ನು ನಡೆಸುತ್ತಿದ್ದನು. ಇತರರು ಪ್ರಾರ್ಥನೆಗಳನ್ನು ಮತ್ತು ರಾತ್ರಿಭೋಜನವು ಹಂಚಿಕೆಯಾಗುವುದನ್ನು ನಡೆಸುತ್ತಿದ್ದರು. ಆರಾಧನೆಯನ್ನು ನಡೆಸುತ್ತಿರುವ ನಮ್ಮಲ್ಲಿ ಯಾರಿಗಾದರೂ ಆ ಸೇವೆಗಳನ್ನು ಮಾಡುವುದು ಸಾಧ್ಯವೇ? ಇಲ್ಲ. ಹಿಂದಿನ ದಿನಗಳಲ್ಲಿ ಸ್ತ್ರೀ ಮತ್ತು ಪುರುಷರು ನಾವು ಕೂಡಿಬಂದ ಕಟ್ಟಡಗಳನ್ನು ಕಟ್ಟುವುದಕ್ಕೆ ಜವಾಬ್ದಾರರಾಗಿದ್ದರು. ಕೆಲವರು ನಾವು ಕೂತುಕೊಳ್ಳಬಹುದಾದ ಆಸನಗಳನ್ನು ಮತ್ತು ನಾವು ಹಾಡಲು ಬಳಸುವ ಪುಸ್ತಕಗಳನ್ನೂ ಒದಗಿಸುತ್ತಿದ್ದರು. ಆ ನಿರ್ದಿಷ್ಟ ಅರಾಧನಾ ಸೇವೆಗೆ, ಒಬ್ಬ ಕ್ರೈಸ್ತನು ಕಟ್ಟಡಗಳನ್ನು ಸ್ವಚ್ಛಗೊಳಿಸುತ್ತಿದ್ದನು; ಮತ್ತೊಬ್ಬನು ರಾತ್ರಿಭೋಜನಕ್ಕಾಗಿ ಸಿದ್ಧತೆಗಳನ್ನು ನಡೆಸುತ್ತಿದ್ದನು; ಇನ್ನೂ ಕೆಲವರು ಕಟ್ಟಡದ ವಾತಾವರಣವು ಅಲ್ಹಾದಕರವಾಗಿದೆಯೋ ಇಲ್ಲವೋ ಎಂದು ಖಚಿತಪಡಿಸಿಕೊಳ್ಳುತ್ತಿದ್ದರು. ಮುಂದೆ, ಅನೇಕರು ಸಲ್ಲಿಸಿದ ಕಾಣಿಕೆಯು ನಮ್ಮ ಬೈಬಲನ್ನು ಮತ್ತು ನಮ್ಮ ಸಂಗೀತ ಪುಸ್ತಕಗಳನ್ನು ನೋಡಲು ಅವಶ್ಯವಿರುವ ವಿದ್ಯುತ್ತನ್ನೂ ಸಹ ಒಳಗೊಂಡ ಅನೇಕ ಖರ್ಚುಗಳನ್ನು ನಿಭಾಯಿಸಲು ಸಹಾಯವಾಯಿತು. ಎಲ್ಲರಿಗೂ ಕಾಣಬರುವಂತಹ ಆರಾಧನೆಯಷ್ಟೇ ಅಲ್ಲದೆ "ಪರದೆಯ ಹಿಂದೆ" ನಡೆಯುವ ಕಾರ್ಯವು ಅಷ್ಟೇ ಮಹತ್ವದ್ದಾಗಿದೆ.

ಒಂದು ವೇಳೆ ಜನರು ತಮಗೆ ಕೊಡಲ್ಪಟ್ಟ ಕೆಲಸದ ಮಹತ್ವವನ್ನು ಅರಿತಿದ್ದೇ ಆದರೆ, ಅವರು ಹೆಚ್ಚಿನ ಒಳ್ಳೆಯ ಕಾರ್ಯಗಳನ್ನು ಮಾಡುವವರೂ ಮತ್ತು ಅದರೊಡನೆ ಇರುವವರೂ ಆಗಿರುತ್ತಾರೆ. ಪ್ರತಿಯೊಬ್ಬ ಒಳ್ಳೆಯ ನಾಯಕರುಗಳು ಅವನ ಅಥವಾ ತಮ್ಮ ತಮ್ಮ ಕೆಲಸದ ಮಹತ್ವದ ಬಗ್ಗೆ ಅರಿತಿರುವ ಬಗೆಗೆ ಖಚಿತಪಡಿಸಿಕೊಳ್ಳುತ್ತಾರೆ.

## ಒಳ್ಳೆಯ ನಾಯಕರುಗಳು ಸಭೆಯ ವಿಶ್ವಾಸ ಮತ್ತು ಬೆಂಬಲದಲ್ಲಿ ಆನಂದಿಸುವವರಾಗಿರುತ್ತಾ ರೆ (6:5)

ಅಪೊಸ್ತಲರಿಂದ ಕೊಡಲ್ಪಟ್ಟ ಆಹ್ವಾನಕ್ಕೆ ಸಭೆಯ ಪ್ರತಿಕ್ರಿಯೆಯು "ಹೊಸ ಒಡಂಬಡಿಕೆಯಲ್ಲಿನ ಶ್ರೇಷ್ಟ ಅದ್ಭುತಗಳಲ್ಲಿ ಒಂದು" ಎಂದು ಕರೆಯಲ್ಪಟ್ಟಿದೆ: ಮತ್ತು "ಸರ್ವಮಂಡಲಿಗೆ ಈ ಮಾತು ಒಳ್ಳೆಯದೆಂದು ತೋರಿತು" (ವಚನ 5ಎ)![12] The New Century Bibleನಲ್ಲಿ "ಸಂಪೂರ್ಣ ಗುಂಪು ಈ ವಿಚಾರವನ್ನು ಮೆಚ್ಚಿಕೊಂಡಿತು"! ಎಂದಿದೆ! ನಾನು ನಾಲ್ವತ್ತು ವರ್ಷಗಳಿಂದ ಬೋಧಿಸುತ್ತಾ ಇದ್ದೇನೆ, ಆದಾಗ್ಯೂ ನನ್ನ ಸಂದೇಶದ ಬಗ್ಗೆ ಒಂದಾದರೂ ಮೆಚ್ಚಿನ ಹೇಳಿಕೆಯನ್ನು ಸಭೆಯ ಯಾರೊಬ್ಬರಿಂದಲೂ ನಾನು ಎಂದಿಗೂ ಕೇಳಿಲ್ಲ! ಅಪೊಸ್ತಲರ ಸಲಹೆಯು ಇಪ್ಪತ್ತು ಅಥವಾ ಮೂವತ್ತು ಸಾವಿರ ಸದಸ್ಯರಿಗೆ ಮೆಚ್ಚಿಕೆವುಳ್ಳದ್ದಾಗಿತ್ತು. ಇದೊಂದು ಅದ್ಭುತವಲ್ಲವೇ!

ಒಂದು ವೇಳೆ ಅಪೊಸ್ತಲರ ಹೇಳಿಕೆಯು ಸಂಪೂರ್ಣ ಸಭೆಗೆ *ಒಪ್ಪಿಗೆಯಾಗದ* ಪಕ್ಷದಲ್ಲಿ ಏನು ಸಂಭವಿಸಬಹುದಿತ್ತು? ಆ ಪರಿಸ್ಥಿತಿಯು ಉದ್ಭವಿಸದೇ ಹೋಗಿದ್ದರಿಂದ ಇದಕ್ಕೆ ನಮಗೆ

ನಿಶ್ಚಿತವಾಗಿ ಉತ್ತರವನ್ನು ಕೊಡಲಿಕ್ಕಾಗದು. ಕೆಟ್ಟ ಸಂಗತಿಗಳು ಇನ್ನಷ್ಟು ಕೆಟ್ಟದ್ದಾಗುತ್ತವೆ ಎಂದು ಹೇಳುವುದರ ಮೂಲಕ ನಾವು ಪಾರಾಗುತ್ತೇವೆ. ಸದಸ್ಯರಿಂದ ಗೌರವವನ್ನು ಕಳೆದುಕೊಂಡ ಸಭೆಯ ನಾಯಕರುಗಳ ಕೆಲ ದುರ್ದೈವದ ಸ್ಥಿತಿಗತಿಗಳನ್ನು ನಮ್ಮಲ್ಲಿ ಅನೇಕರು ನೋಡಿದ್ದಾರೆ (ಒಂದು ವೇಳೆ ಅನುಭವವಾಗಿರಲ್ಲಿಕ್ಕಿಲ್ಲ). ಇದು ಸಂಭವಿಸಿದಾಗ, ದುರಂತವು ಹೆಚ್ಚು ದೂರವೇನಿರುವುದಿಲ್ಲ.

"ಸರ್ವಮಂಡಲಿಯ ಈ ಮಾತು ಒಳ್ಳೆಯದೆಂದು ತೋರಿತು" ಎಂಬ ಪದವು ಅಪೊಸ್ತಲರು ಸಂಗತಿಗಳನ್ನು ನಿರ್ವಹಿಸುತ್ತಿದ್ದ ರೀತಿಗೆ ಒಂದು ಕೊಡುಗೆಯಾಗಿದೆ. ಹನ್ನೆರಡು ಜನರು, ಸ್ಫೋಟಗೊಳ್ಳುವ ಸನ್ನಿವೇಷವನ್ನು ಸೂಕ್ಷ್ಮವಾಗಿ ಮತ್ತು ಜಾಣತನದಿಂದ ನಿರ್ವಹಿಸಿದರು. ಅವರು ತಮ್ಮ ವಿಶ್ವಾಸವನ್ನು ಸಭೆಯ ಮೇಲೆ ವ್ಯಕ್ತಪಡಿಸಿದರು, ಮತ್ತು ಈಗ ಸದಸ್ಯರು ಒಬ್ಬರಿಗೊಬ್ಬರು ತಮ್ಮ ಬೆಂಬಲದೊಂದಿಗೆ ಪೂರಕವಾಗಿದ್ದರು. ಇದು ಹೀಗೆ ಪ್ರತಿಯೊಂದು ಸಭೆಯಲ್ಲಿ *ಇರಬೇಕು* ಮತ್ತು ನಾಯಕರು ಮತ್ತು ಸದಸ್ಯರು ಪ್ರತಿಯೊಬ್ಬರೂ ಪ್ರೀತಿ ಪೂರಕ ಮತ್ತು ಗೌರವಪೂರಕವಾಗಿ ಇದ್ದಾಗ ಇಂಥ ಸುಸ್ಥಿತಿಯು ಮುಂದುವರೆಯುತ್ತದೆ.

## ಒಳ್ಳೆಯ ನಾಯಕರುಗಳು ಕೆಲಸಮಾಡುವವರಿಗೆ ತಮ್ಮ ಬೆಂಬಲವನ್ನು ಕೊಡುತ್ತಾರೆ ಮತ್ತು ತಮ್ಮ ವಿಶ್ವಾಸವನ್ನು ಹಂಚಿಕೊಳ್ಳುತ್ತಾರೆ (6:5, 6)

ಸಭೆಯು ಅಪೊಸ್ತಲರ "ಸಲಹೆಯನ್ನು" ಒಪ್ಪಿಕೊಂಡಿದ್ದರಿಂದ ಆ ವಿಚಾರವು ಬೇಗನೇ ಕಾರ್ಯರೂಪಕ್ಕೆ ಬಂದಿತು "ಮತ್ತು ಅವರು [ಸಭೆಯು] ಪರಿಶುದ್ಧತ್ಮಾ ಭರಿತನೂ ನಂಬಿಕೆಯಿಂದ ತುಂಬಿದವನೂ ಆದ ಸ್ತೇಪನನ್ನೂ, ಫಿಲಿಪ್ಪ ಪ್ರಖೋರ, ನಿಕನೋರ, ತಿಮೋನ, ಪರ್ಮೆನ, ಯೆಹೂದ್ಯ ಮತಾವಲಂಬಿಯಾದ[13] ಅಂತಿಯೋಕ್ಯದ ನಿಕೋಲಾಯ ಎಂಬವರನ್ನು ಆರಿಸಿಕೊಂಡರು" (ವಚನ 4ಬಿ). ಈ ಏಳು ಜನರ ಆಯ್ಕೆಯನ್ನು ಸಭೆಯು ಹೇಗೆ ನಿರ್ಧರಿಸಿತು? ಇದು ಜನಪ್ರೀಯತೆಯ ಸ್ಪರ್ಧೆಯಾಗಿರಲಿಲ್ಲ; ಅಪೊಸ್ತಲರು ಸಭೆಯ ಮುಂದೆ ಅವಶ್ಯವಿರುವ ಬೇಡಿಕೆಗಳನ್ನು ಇಟ್ಟರು ಮತ್ತು ಸಭೆಯು ಅವುಗಳನ್ನು ಅಷ್ಟೇ ಕಟ್ಟುನಿಟ್ಟಾಗಿ ಪರಿಪಾಲಿಸಿತು, ಈ ವಿವರವನ್ನು ಬಿಟ್ಟರೆ ಲೂಕನು ಆ ಆಯ್ಕೆಯು ಹೇಗೆ ಮಾಡಲಾಯಿತು ಎಂಬುದಕ್ಕೆ ಹೆಚ್ಚಿನ ವಿವರಣೆಗಳನ್ನು ಕೊಟ್ಟಿಲ್ಲ. ದೇವರು ಮನುಷ್ಯರಿಗೆ *ಏನು* ಮಾಡಬೇಕೆಂದು ಹೇಳಿದಾಗ, ಆತನು ಕೆಲಸಾರಿ ತನ್ನ ಚಿತ್ತವನ್ನು[14] ತೋರ್ಪಡಿಸುವ ಅವರ ಒಳ್ಳೆಯ ನ್ಯಾಯತೀರ್ಪನ್ನು ಮಾಡಲು ಅವರ ಮೇಲೆ ಬಿಡುವನು. ಈ ಪ್ರಕರಣವು ಅದೇ ರೀತಿಯಲ್ಲಿ ಇತ್ತು.

ಆಯ್ಕೆಯಾದ ಏಳು ಜನರಲ್ಲಿ ಮೊದಲ ಹೆಸರು ಸ್ತೇಪನದು ಇತ್ತು ಈತನು ಪರಿಶುದ್ಧಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ[15] ಆಗಿದ್ದನು. ಸ್ತೇಫನನ ಹೆಸರು ಮೊದಲು ಸೂಚಿತವಾದುದದರ ಕಾರಣ ಆತನು ಈ ಅಧ್ಯಾಯದದ ಕೊನೆಯ ಭಾಗದಲ್ಲಿ ಮತ್ತು ಅಧ್ಯಾಯದಲ್ಲಿನ ಪ್ರಮುಖ ವ್ಯಕ್ತಿಯಾಗಿದ್ದಾನೆ. ಫಿಲಿಪ್ಪನು ಮುಂದಿನ ಪಟ್ಟಿಯಲ್ಲಿ ಬರುತ್ತಾನೆ ಏಕೆಂದರೆ ಆತನು 8ನೆಯ ಅಧ್ಯಾಯದ ಪ್ರಧಾನ ವ್ಯಕ್ತಿಯಾಗಿದ್ದಾನೆ. ಇತರ ಐವರಾದ ಪ್ರಖೋರ,[16] ನಿಕನೋರ, ತಿಮೋನ, ಪರ್ಮೆನ, ಯೆಹೂದ್ಯ ಮತಾವಲಂಭಿಯಾದ ಅಂತಿಯೋಕ್ಯದ[17] ನಿಕೋಲಾಯ[18] ಇವರ ಬಗೆಗೆ ಹೊಸ ಒಡಂಬಡಿಕೆಯು ಏನನ್ನೂ ಹೇಳಿಲ್ಲ. ಈ ಸಂಗತಿಯ ದೊಡ್ಡ ಪ್ರಾಮುಖ್ಯತೆ ಎಂದರೆ ಇವೆಲ್ಲವುಗಳು ಗ್ರೀಕ ಹೆಸರುಗಳು ಆಗಿವೆ. ಇದು ಸೂಚಿಸುವುದೇನೆಂದರೆ ಆಯ್ಕೆ ಮಾಡಲ್ಪಟ್ಟ ಎಲ್ಲರೂ (ಹೆಚ್ಚಿನವರು) ಗ್ರೀಕ ಭಾಷೆಯ ಯೆಹೂದ್ಯರು ಎಂಬುದಕ್ಕೆ ಅಲ್ಲಿ ಬಲವಾದ ಸಾಧ್ಯತೆಗಳಿವೆ.[19] ಹಾಗಾದರೆ, ಸಭೆಯ ಭಾಗದಲ್ಲಿ ನಾವು ಆಶ್ಚರ್ಯಕರವಾದ ಕೌಶಲವನ್ನು ಕಾಣುತ್ತೇವೆ. "ಗುಣುಗುಟ್ಟುವಿಕೆಯು ಸಭೆಯ ಗ್ರೀಕ್ - ಮಾತನಾಡುವವರ ಗುಂಪಿನಿಂದ ಬಂದಿತು; ಹೀಗೆ ಆಯ್ಕೆಯಾದವರ ಕೆಲಸಕ್ಕಾಗಿನ ಕಾಳಜಿಯು ಅವರ ಸಂಖ್ಯೆಯಿಂದ ಬಂದುದು ಆಗಿದ್ದು ಹೀಗೆ ಅವರು ತಮ್ಮ

ಅಭಿರುಚಿಯನ್ನು ಯೋಗ್ಯವಾಗಿ ಪ್ರತಿನಿಧಿಸಿದರು."[20] ಇಬ್ರಿಯ ಯೆಹೂದಿಗಳು,[21] ಇದರ ಅಂಶವಾಗಿ, ಗ್ರೀಕ ಭಾಷೆಯ ಯೆಹೂದಿಗಳಿಗೆ ಹೇಳಿದ್ದೇನೆಂದರೆ "ನೀವು ನಮ್ಮ ವಿಧವೆಯರನ್ನು ಚೆನ್ನಾಗಿ ನೋಡಿಕೊಳ್ಳುತ್ತೀರೆಂಬ ವಿಶ್ವಾಸ ನಮಗಿದೆ."[22]

ಸಭೆಯು ಏಳು ಜನರನ್ನು ಆಯ್ಕೆಮಾಡಿದ ನಂತರ "ಅವರನ್ನು ಅಪೊಸ್ತಲರ ಮುಂದೆ ನಿಲ್ಲಿಸಿದರು. ಅಪೊಸ್ತಲರು[23] ಪ್ರಾರ್ಥನೆ ಮಾಡಿ ಅವರ ಮೇಲೆ ಕೈಗಳನ್ನಿಟ್ಟು ನೇಮಿಸಿದರು" (ವಚನ 6). ಪ್ರತಿಯೊಬ್ಬರನ್ನೂ ಸೇವೆಮಾಡಲು ಆಯ್ಕೆಮಾಡಲ್ಪಟ್ಟಾಗ, "ಆ ಸ್ಥಳದಲ್ಲಿ ಇರಿಸುವುದು"[24] ಅವಶ್ಯವಾಗಿದೆ ಅವರನ್ನು ಧಾರ್ಮಿಕ ಆಚರಣೆಯೊಂದಿಗೆ ಅವರ ಮನಸ್ಸಿನ ಮೇಲೆ ಗಂಭೀರವಾದ ಕೆಲಸದ ಅನುಭವವು ಆಗುವದು ಮತ್ತು ಅವರ ಮನದ ಮೇಲಿನ ಅನುಭವವಾಗಿದ್ದು ಸೇವೆಮಾಡುವವರಿಗೆ ಅವಶ್ಯಕವಾದ ಸಹಾಯವು ಮತ್ತು ಅವರಿಗಾಗಿನ ಬೆಂಬಲವೂ ಆಗಿದೆ. ಇದನ್ನು ಅಪೊಸ್ತಲರು ಸಭೆಯ ಮುಂದೆ ಏಳು ಜನರಿಗಾಗಿ ಪ್ರಾರ್ಥನೆ ಮಾಡುವುದರ ಮೂಲಕ (ನೋಡಿರಿ 14:23 ಸಹ) ಮತ್ತು ಅವರ ಮೇಲೆ ಕೈಗಳನ್ನು ಇಡುವುದರ ಮೂಲಕ ಮಾಡಿದರು.

(ತಲೆಯ ಮೇಲೆ) ಕೈಗಳನ್ನು ಇಡುವ ಆಚರಣೆಯಲ್ಲಿ ಏನು ಒಳಗೊಂಡಿದೆ ಎಂದು ನಮಗೆ ಸರಿಯಾಗಿ ತಿಳಿಯದು. ಬೈಬಲಿನ ಸಮಯದಲ್ಲಿ ವಿವಿಧ ಕಾರಣಗಳಿಗಾಗಿ ಜನರ ಮೇಲೆ ಕೈ ಇಡುತ್ತಿದ್ದರು: ಆಶೀರ್ವಾದವನ್ನು ನೀಡಲು (ಆದಿಕಾಂಡ 48:13-20), ಸ್ವಸ್ಥ ಮಾಡಲು (ಅಪೊಸ್ತಲರ ಕೃತ್ಯಗಳು 28:8), ಅಧಿಕಾರಿಗಳನ್ನು ನೇಮಿಸಲು ಮತ್ತು ಅಧಿಕಾರವನ್ನು ಧೃಢಪಡಿಸಲು (ಅರಣ್ಯಕಾಂಡ 27:18; ಅಪೊಸ್ತಲರ ಕೃತ್ಯಗಳು 13:3).[25] ಅಪೊಸ್ತಲರು ಸಹ ಅದ್ಭುತ ವರಗಳನ್ನು ಕೊಡಲು ತಮ್ಮ ಕೈಗಳನ್ನು ಕ್ರೈಸ್ತರ ಮೇಲೆ ಇಟ್ಟರು (ಅಪೊಸ್ತಲರ ಕೃತ್ಯಗಳು 8:18; 19:6). ಏಳು ಜನರ ವಿಚಾರದಲ್ಲಿ, ಕೈಗಳನ್ನು ಇಡುವುದು ಎರಡು ಉದ್ದೇಶ ಗಳನ್ನು ಹೊಂದಿರುವುದಾಗಿದೆ; ಅವರ ಹೊಸದಾದ ನಿಯೋಜಿತ ಕಾರ್ಯಕ್ಕೆ ಅವರನ್ನು ಮೀಸಲಾಗಿಡುವುದು ಮತ್ತು ಅವರಿಗೆ ಹೊಸ ಜವಾಬ್ದಾರಿಗಳಿಗೆ ಯೋಗ್ಯವಾಗಿರುವಂತೆ ಹೊಸ ಸಾಮರ್ಥ್ಯವನ್ನು[26] ಕೊಡುವದು ಆಗಿದೆ.[27] ಅಪೊಸ್ತಲರ ಕಾರ್ಯಗಳು ಆಯ್ಕೆಯಾದ ಈ ಮನುಷ್ಯರಿಗೂ ಹಾಗೂ ಸಭೆಗೆ ಹೇಳುವುದೇನೆಂದರೆ "ನಾವು ಈ ಜನರ ಹಿಂದೆ ಇದ್ದೇವೆ ಮತ್ತು ಪ್ರತಿಯೊಂದು ರೀತಿಯಲ್ಲೂ ನಾವೂ ಅವರನ್ನು ಬೆಂಬಲಿಸುವವರಾಗಿದ್ದೇವೆ!" ಒಳ್ಳೆಯ ನಾಯಕರುಗಳು ತನ್ನ ಬೆಂಬಲವನ್ನು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾರೆ.

ನಾವಾದರೋ ಜನರ ಮೇಲೆ ನಮ್ಮ ಕೈ ಇಡುವುದರ ಮೂಲಕ ಅದ್ಭುತೀಯ ಸಾಮರ್ಥ್ಯಗಳನ್ನು ನೀಡಿದಂಥ ಅಪೊಸ್ತಲರಲ್ಲ. ಈ ಸಂದರ್ಭಗಳನ್ನು ಹೀಗೆ ಗುರುತಿಸಬಹುದು: ನಮ್ಮ ಹೊಸ ನಾಯಕರುಗಳು ಆಯಲ್ಪಟ್ಟಾಗ ಅವರ ಮಾರ್ಗಗಳು ಅಪೊಸ್ತಲರ ಮಾರ್ಗಗಳಿಗಿಂತ ವಿಭಿನ್ನವಾದವುಗಳಾಗಿವೆ. ಅವರ ಉದಾಹರಣೆಗಳನ್ನು ಈ ರೀತಿಯಲ್ಲಿ ನಾವು ದೃಢಸಂಕಲ್ಪದಿಂದ ಅನುಸರಿಸೋಣ: (1) ಭಕ್ತಿಭಾವಗಳಿಂದ ಕೂಡಿದ ಪ್ರಾರ್ಥನೆಯಲ್ಲಿ ನಾವು ನಿರತರಾಗಿರೋಣ, (2) ಕೆಲಸದ ಗಂಭೀರತೆಯ ಬಗೆಗೆ ಒತ್ತಿ ಹೇಳುವವರಾಗಿರೋಣ, ಮತ್ತು (3) ನೇಮಕಗೊಂಡಿರುವವರಿಗೆ ನಮ್ಮ ಬೆಂಬಲವನ್ನು ತೋರಿಸುವವರಾಗಿರೋಣ.[28]

ಒಳ್ಳೆಯ ನಾಯಕರುಗಳು ಹೊಸ ಕೆಲಸಗಾರರಿಗೆ ತಮ್ಮ ಬೆಂಬಲವನ್ನು ಮಾತ್ರ ಸೂಚಿಸುವುದಲ್ಲ: ಅವರು ಆ ಕೆಲಸವನ್ನು ಕಾರ್ಯಗತಗೊಳಿಸುವ *ವಿಶ್ವಾಸವನ್ನು* ಹೊಂದಿರುವರು. ವಚನ 6 ಮತ್ತು 7 "ವಚನಗಳನ್ನು ವಿಮರ್ಷಾಪೂರ್ವಕವಾಗಿ ಓದುವಾಗ," ಈ ಕೆಳಗಿನವುಗಳನ್ನು ನಾನು ಸೂಚಿಸುವವನಾಗಿದ್ದೇನೆ: (1) ಆ ಏಳು ಜನರ ಮೇಲೆ ಕೈಯಿಟ್ಟು ಪ್ರಾರ್ಥಿಸಿದ ನಂತರ, ಅಪೊಸ್ತಲರು ಯಾವುದೇ ಮಧ್ಯ ಪ್ರವೇಶಿಸುವಿಕೆಯಿಲ್ಲದೇ ಅವರಿಗೆ ಅವರ ಕಾರ್ಯವನ್ನು ಮಾಡಲು ಅನುವುಮಾಡಿಕೊಟ್ಟರು, (2) ಏಳೂ ಜನರಿಗೆ ಆ ಕೆಲಸದ ಬಗೆಗೆ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವಾಗ ಅಪೊಸ್ತಲರಿಂದ

ಪ್ರತಿಸಾರಿ ನಿಯಂತ್ರಣಕ್ಕೊಳಗಾಗುವ ಅವಶ್ಯಕತೆಯು ಇರಲಿಲ್ಲ; (3) ಏಳೂ ಜನರು ತಮಗೆ ವಹಿಸಿದ್ದಷ್ಟನ್ನೇ ಮಾಡಬೇಕಾಗಿರಲಿಲ್ಲ. ಈ ಮೊದಲ ಎರಡು ಹೇಳಿಕೆಗಳನ್ನು ನಿಜ ವೆಂದು ನಾನು ಒಪ್ಪಿಕೊಳ್ಳುತ್ತೇನೆ, ಯಾಕೆಂದರೆ ಯಾವುದೆ ಇತರ ವ್ಯವಸ್ಥೆಗಳು ಆ ಜನರನ್ನು ಆರಿಸಿಕೊಂಡ ಉದ್ದೇಶವನ್ನು ನಿರರ್ಥಕಗೊಳಿಸಬಹುದಾಗಿತ್ತು; ಮತ್ತು ಅಪೊಸ್ತಲರು ತಮ್ಮನ್ನು ತಾವು ವಾಕ್ಯೋಪದೇಶದ ಸೇವೆಯಿಂದ ವಿಚಲಿತರಾಗಬಹುದಿತ್ತು. ನಾವು ಮೂರನೆಯ ಅಂಶವನ್ನು ನಿಜ ಎಂದು ಒಪ್ಪಿಕೊಳ್ಳುವುದಕ್ಕೆ ಕಾರಣ ವಚನ 7ರಲ್ಲಿ ಸಕಾರತ್ಮಕ ಪರಿಣಾಮವು ವರದಿಮಾಡಲ್ಪಟ್ಟದ್ದರಿಂದ.

ನಾನು ಈ ವಿವರಗಳನ್ನು ಒತ್ತಿ ಹೇಳುವುದಕ್ಕೆ ಕಾರಣವೇನೆಂದರೆ, ಡೀಕನ್ನರ ಆಯ್ಕೆಯನ್ನು ಮಾಡಿದ್ದಾಗಲೂ ಕೂಡಾ ಹಿರಿಯರನ್ನು ಅವರ ಬೋಧಿಸುವಿಕೆಯ ಸೇವೆಯ ಕಡೆಗೆ ಲಕ್ಷೀಕರಿಸಲು ಸಾಧ್ಯವಾಗುತ್ತಾ ಇಲ್ಲ: ಡೀಕನ್ನರು ಪ್ರತಿಯೊಂದು ನಿರ್ಧಾರವನ್ನು ಸರಿಯೋ ತಪ್ಪೋ ಎಂದು ಹಿರಿಯರ ಜೊತೆಗೆ ಸಂಪರ್ಕಿಸುವುದುಂಟು.[29] ನಾನು ಎಲ್ಲ ಹಿರಿಯರಿಗೆ ಹೇಳುವುದೇನೆಂದರೆ - ಡೀಕನ್ನರು ಆಯ್ಕೆಯಾದಾಗ ಅವರ ಕೆಲಸವನ್ನು ಅವರು ಮಾಡಲಿ! ಅವರ ಕೆಲಸಮಾಡುತ್ತಾರೆಂಬ ವಿಶ್ವಾಸ ನಿಮಗಿರಲಿ. ನೀವು ಅವರು ಮಾಡುವ ಕೆಲಸದ ಮೇಲೆ ವಿಶ್ವಾಸವಿಡದಿದ್ದರೆ, ಅವರನ್ನು ನೇಮಿಸದಿರಿ. ಅವರು ನಿಮ್ಮ ವಿಶ್ವಾಸವನ್ನು ಘಾಸಿಗೊಳಿಸಿದ್ದಾದರೆ ಮತ್ತು ತಮ್ಮ ಕಾರ್ಯವನ್ನು ಮಾಡುವಲ್ಲಿ ವಿಫಲರಾದರೆ ನೀವು ವಿಶ್ವಾಸವಿಡುವ ಬೇರೆ ಯಾರನ್ನಾದರೂ ನೇಮಿಸಿರಿ. ನಿಮ್ಮ ಸಮಯವನ್ನು ಮಂದೆಯನ್ನು ಕಾಯುವ ಕುರುಬರಾಗಿರುವುದಕ್ಕೆ ಮೀಸಲಾಗಿಡಿರಿ!

## ಮುಕ್ತಾಯ

ಸೈತಾನನು ಸಭೆಯನ್ನು ನಾಶಮಾಡಲು ಮತ್ತೊಂದು ಸಾರಿ ಪ್ರಯತ್ನಿಸಿದನು, ಮತ್ತು ಮತ್ತೊಂದು ಸಾರಿಯೂ ಆತನು ವಿಫಲನಾದನು. ನಮ್ಮ ಹಿಂದಿನ ಪಾಠವು ಆಶ್ಚರ್ಯಕರವಾದ ಬೆಳವಣಿಗೆಯ ಹೇಳಿಕೆಯೊಂದಿಗೆ ಪ್ರಾರಂಭವಾಯಿತು; ಈ ಪಾಠವು ಅದಕ್ಕೆ ಹೊಂದಿಕೆಯಾದ ಹೇಳಿಕೆಯೊಂದಿಗೆ ಕೊನೆಗೊಳ್ಳುತ್ತದೆ: "ಮತ್ತು ದೇವರ ವಾಕ್ಯವು ಪ್ರಭಲವಾಯಿತು. ಶಿಷ್ಯರ ಸಂಖ್ಯೆಯು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚುತ್ತಾ ಬಂತು" (ವಚನ 7ಎ). ಹಿಂದೆ ನಾವು ಸದಸ್ಯತ್ವವನ್ನು ಇಪ್ಪತ್ತರಿಂದ ಮೂವತ್ತು ಸಾವಿರಕ್ಕೆ ಲೆಕ್ಕ ಹಾಕಿದ್ದೆವು; ಈಗ "ಸಂಖ್ಯೆಯು ... ಯೆರೂಸಲೇಮಿನಲ್ಲಿ *ಬಹಳವಾಗಿ* ಹೆಚ್ಚುತ್ತಾ ಬಂತು." ಒಟ್ಟು ಸಂಖ್ಯೆಯನ್ನು ನಾವು ಊಹಿಸಲೂ ಸಾಧ್ಯವಿಲ್ಲ! ಈ ವೃದ್ಧಿಯ ಹೇಳಿಕೆಯು ಈ ಅದ್ಭುತವಾದ ಹೇಳಿಕೆಯನ್ನು ಕೂಡಿಸಿಕೊಳ್ಳುತ್ತದೆ. "ಯಾಜಕರಲ್ಲಿಯೂ ಬಹುಜನರು ಕ್ರಿಸ್ತನಂಬಿಕೆಗೆ ಒಳಗಾಗುತ್ತಾ ಇದ್ದರು" (ವಚನ 7ಬಿ; ಒತ್ತಿ ಹೇಳಿದ್ದು ನನ್ನದು). ಇವರು ಬಹುಶಃ "ಮುಖ್ಯಯಾಜಕರಾಗಿರಲಿಲ್ಲ" ಹಿಂಸೆಗೊಳಗಾದ ಅಪೊಸ್ತಲರಾಗಿರ ಬೇಕು (4:23; 5:24), ಬದಲಾಗಿ ಪ್ರತಿವರ್ಷದಲ್ಲಿ ಎರಡುವಾರ ದೇವಾಲಯದಲ್ಲಿ ಸೇವೆ ಮಾಡುತ್ತಿರುವ "ಸಾಮಾನ್ಯ" ಯಾಜಕರು ಆಗಿದ್ದರು.[30] ಇದೊಂದು ಗಮನಾರ್ಹವಾದಹೇಳಿಕೆಯಾಗಿದೆ. ಮಂಡಳಿಯಲ್ಲಿರುವಂತ ಯಾಜಕರು ಭಿನ್ನವಿಚಾರವುಳ್ಳವರು ಆಗಿದ್ದಂತವರಾಗಿದ್ದರೂ; ಮಂಡಳಿಯಲ್ಲಿದ್ದಂತಹ ಎಲ್ಲರೂ ಹಾಗೆ ಇರಲಿಲ್ಲ. ಅವರಲ್ಲಿ ಅನೇಕರು ಕ್ರೈಸ್ತತ್ವದ ಬಗ್ಗೆ ಶೋಧಿಸುವ ಪ್ರಾಮಾಣಿಕವಾದ ಹೃದಯವನ್ನು ಹೊಂದಿದ್ದರು. ಹೀಗೆ ಅವರು "ನಂಬಿಕೆಗೆ ವಿಧೇಯರಾಗಿದ್ದರು"[31] ಮತ್ತು ಕ್ರೈಸ್ತರಾದರು. ಸುವಾರ್ತೆಯ ಶಕ್ತಿಗೆ ಎಂಥ ಕೊಡುಗೆ ಇದಾಗಿದೆ!

ವಚನ 7 ಯೆರೂಸಲೇಮಿನಲ್ಲಿನ ಸಭೆಯ ಬೆಳವಣಿಗೆಯ ಬಗೆಗೆ ಹೇಳಿಕೆಯನ್ನು ಕೊಡುತ್ತದೆ. ಇದು ಜನರು ಬಿರುಕುಗಳ ಮೂಲಕ ಬೀಳುವಾಗ, ಒಳ್ಳೆಯ ನಾಯಕತ್ವವು ಸಕಾರಾತ್ಮಕ ರೀತಿಯಲ್ಲಿ ಪ್ರತಿಕ್ರಯಿಸಿದಾಗ ಏನು ಸಂಭವಿಸುತ್ತದೆ ಎಂಬುದನ್ನು ಇದು ತೋರಿಸುತ್ತದೆ!

ಟಿಪ್ಪಣೆಗಳು

[1]ಅಪೊಸ್ತಲರ ಕೃತ್ಯಗಳು 1:21ರಲ್ಲಿ ಅಪೊಸ್ತಲರ ಕೃತ್ಯಗಳ ಪುಸ್ತಕ 1ರಲ್ಲಿ ಸಿಕ್ಕುವ ವ್ಯಾಖ್ಯಾನವನ್ನು ನೋಡಿರಿ. [2]ಬದಲಾಗಿ, ಅವರು "ಏಳು ಜನರು" ಎಂದು ಕರೆಯಲ್ಪಟ್ಟರು (21:8). [3]ಉದಾಹರಣೆಗಾಗಿ, ಕುಟುಂಬವು ಡೀಕನ್ನರಾಗಿರುವುದಕ್ಕೆ ಅರ್ಹತೆಗಳಿರುವ ಒಂದು ಪ್ರಮುಖ ಭಾಗವಾಗಿದೆ, ಆದರೆ ಈ ಏಳು ಜನರಲ್ಲಿ ಕೊಡಲ್ಪಟ್ಟ ಅರ್ಹತೆಗಳನ್ನು ಕುಟುಂಬವೂ ಒಳಗೊಂಡಿರುವುದಿಲ್ಲ. [4]ಡಯಾಕೋನಾ ಎಂಬ ಗ್ರೀಕಪದವು ವರ್ಗವನ್ನು ಸೂಚಿಸುವ ಯಾವುದೇ ಸೇವಕನನ್ನು ಅಥವಾ ವಿಶೇಶ ರೀತಿಯಲ್ಲಿ ಸಭೆಯಿಂದ "ಡೀಕನ್" ಗುರುತಿಸಲ್ಪಟ್ಟವರಿಗೆ ಸೂಚಿಸಲು ಬಳಸಲ್ಪಡುತ್ತಿದ್ದುದು ಆಗಿದೆ. ಪದಗಳ ಪಟ್ಟಿಯಲ್ಲಿ "ಡೀಕನ್" ನೋಡಿರಿ. [5]ಡೀಕನ್ನರು ಸ್ವೀಕರಿಸುವ ಮೂಲ ಜವಾಬ್ದಾರಿಕೆಗಳೊಂದಿಗೆ 6:3ರಲ್ಲಿನ ಡೀಕನ್ನರ ಅರ್ಹತೆಗಳನ್ನು ಕೂಡಿಸಿಕೊಳ್ಳುವದು ಸಹಜವಾಗಿದೆ. ಇಲ್ಲಿನ ಎರಡು ಪಟ್ಟಿಗಳು ಬಹುಶಃ ಒಂದಕ್ಕೊಂದು ಪೂರಕದಂತೆ ಯೋಚಿಸಲ್ಪಟ್ಟಿದೆ. [6]"ಉನ್ನತ ವೈಯಕ್ತಿಕ ಚಿತ್ರಣ" ನಾವೇನನ್ನು ಮಾಡುತ್ತೇವೆ ಎಂದು ಇತರರಿಂದ ನೋಡಬಹುದಾದ ಸ್ಥಾನವನ್ನು ಸೂಚಿಸುವುದಾಗಿದೆ; "ಕಿರಿಯ ವೈಯಕ್ತಿಕ ಚಿತ್ರಣವು" ನಾವೇನು ಮಾಡುತ್ತೇವೆ ಎಂದು ಇತರರು ತಿಳಿಯದಿರುವ ಸ್ಥಾನವನ್ನು ಸೂಚಿಸುವುದಾಗಿದೆ. [7]ಇದು ವ್ಯಕ್ತಿಯು ಎಷ್ಟು ಚೆನ್ನಾಗಿ ಮಾತನಾಡುತ್ತಾನೆ, ಹಾಡುವುದನ್ನು ನಡೆಸುತ್ತಾನೆ, ಪ್ರಾರ್ಥಿಸುತ್ತಾನೆ ಮುಂತಾದವುಗಳು ಆತನ ವರಗಳು ಆತನ ದೈವೀಕ ಜೀವನವು ಪೂರಕವಾಗಿರದಿದ್ದರೆ, ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲ; ಇಂಥವನ ಶ್ರಮವು ಸಾಮಾನ್ಯವಾಗಿ ಸಭೆಗೆ ಸಹಾಯವಾಗುವುದಕ್ಕಿಂತ ಹೆಚ್ಚಾಗಿ ನೋವನ್ನು ಉಂಟುಮಾಡುತ್ತವೆ. [8]ಈ ಪದಗುಚ್ಛವು ಅದ್ಭುತೀಯವಾದ ಸಾಮರ್ಥ್ಯಗಳು ಅಪೊಸ್ತಲರಿಗೆ ಅನ್ವಯಿಸಿದಾಗ ಸೂಚಿತವಾದವುಗಳಾಗಿವೆ. ಈ ವಿಷಯಕ್ಕೆ, ಅಪೊಸ್ತಲರು ಮಾಡಿದಂತಹ ಅದ್ಭುತಗಳನ್ನು ಬಿಟ್ಟರೆ ನಮಗೆ ಯಾವ ಆಧಾರಗಳು ನಮಗೆ ಸಿಕ್ಕುವುದಿಲ್ಲ. ಅಪೊಸ್ತಲರು ಸ್ತೇಫನ ಮತ್ತು ಫಿಲಿಪ್ಪಿರ ತಲೆಯ ಮೇಲೆ ಕೈ ಇಟ್ಟ ನಂತರ ಅವರು ಅದ್ಭುತ ಕಾರ್ಯರ್ಗಳನ್ನು ಮಾಡುವಲ್ಲಿ ಸಮರ್ಥರಾದರು ಎಂದು ಇದು ಸೂಚಿಸುವುದಾಗಿದೆ (ಗಮನಿಸಿರಿ 8:18). [9]ಅವರು ಅಪೊಸ್ತಲರು ಬೋಧಿಸಿದ ಬೋಧನೆಯನ್ನು ಕೇಳಿದರು. [10]ಮೊದಲ ನೋಟದಲ್ಲಿ, ಅಪೊಸ್ತಲರ ಕೃತ್ಯಗಳು 6ರಲ್ಲಿ ಕೇವಲ ಮೂರು ಸೇವಕರು ಅರ್ಹತೆಗಳು ಇರುವುದನ್ನು ನೋಡುತ್ತೇವೆ. ಹೀಗಿರುವುದರಿಂದ, ಒಬ್ಬ ಮನುಷ್ಯನು "ಪರಿಶುದ್ಧಾತ್ಮನಿಂದ ತುಂಬಲ್ಪಡುವದು" ಎಂದು ಕರೆಯಲ್ಪಡುವದು ಆತನು "ಆತ್ಮನ ಫಲದಿಂದ" ತುಂಬಿದಾಗ ಮಾತ್ರ ಆತನು ಜೀವಿತದಲ್ಲಿ ಕಂಡುಬರುವುದೇ ಆಗಿದೆ, ಇದು ಒಂಬತ್ತು ಹೆಚ್ಚಿನ ಅರ್ಹತೆಗಳನ್ನು ಸೂಚಿಸುವುದಾಗಿದೆ!

[11]ಸ್ಥಳೀಯ ಸಭೆಗಳಲ್ಲಿನ ವಿಷೇಶ ಕಾರ್ಯ ಅಥವಾ ಸ್ಥಾನಗಳು ಸಮಯಕ್ಕೆ ತಕ್ಕಂತೆ ಪಟ್ಟಿಮಾಡಲ್ಪಟ್ಟಿವೆ. [12]ನೀವು 5:7ರಂತೆ "ಹೊಸ ಒಡಂಬಡಿಕೆಯ ಶ್ರೇಷ್ಟ ಅದ್ಭುತ" ಎಂಬಂತೆ ನೀವು 5:7ನ್ನು ಸೂಚಿಸಿದರೆ, 6:25ನ್ನು "ಎರಡನೆಯ ಶ್ರೇಷ್ಟ ಅದ್ಭುತ" ಎಂದು ಕರೆಯಬಹುದು. ಇದು ಹಾಸ್ಯಕ್ಕಾಗಿ ಹೇಳಿದವುಗಳಾಗಿವೆ, ಆದರೆ ಇದು ನಾಯಕತ್ವ ಮತ್ತು ಸಭೆಯ ಮಧ್ಯದ ಸಂಬಂಧದ ಬಗೆಗೆ ಗಂಭೀರ ವಾದ ಸೂಚನೆಯನ್ನು ಮಾಡುತ್ತದೆ. [13]ಇದು ಮೊದಲು ಸೂಚಿತವಾದಂಥಹ ಸಭೆಯ ಧಾರ್ಮಿಕ ಗುಂಪಾಗಿದೆ. ಬಹುಶಃ ಕೆಲವರು ಮೊದಲೇ ದೀಕ್ಷಾಸ್ನಾನ ಹೊಂದಿದ್ದರಬೇಕು (ಅಪೊಸ್ತಲರ ಕೃತ್ಯಗಳು 2:10, 38, 41), ಆದರೆ ಇದು ಮೊದಲ ಧಾರ್ಮಿಕ ಗುಂಪೆಂದು ಕ್ರೈಸ್ತರಾದವರಿಗೆ ಸೂಚಿತವಾಯಿತು. ಅಪೊಸ್ತಲರ ಕೃತ್ಯಗಳ ಪದಕೋಶದಲ್ಲಿ ನೋಡಿರಿ "ಧಾರ್ಮಿಕ ಗುಂಪು" ಪುಸ್ತಕ 1. [14]14:21-23ರ ಜೊತೆ ಜೋಡಿಸುವಲ್ಲಿ ಇನ್ನೂ ಕೆಲ ಸಲಹೆಗಳು ಕೊಡಲ್ಪಟ್ಟಿವೆ. [15]"ನಂಬಿಕೆಯಿಂದ ತುಂಬಿದವನೂ" ಇದು ನಿರ್ಧಿಷ್ಟವಾಗಿ ಸೂಚಿತವಾದುದಲ್ಲ ಆದರೆ ಇದು ಅರ್ಹತೆಗಳಲ್ಲಿ ಸೂಚಿತವಾಗಿದೆ. ಪರಿಶುದ್ಧಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಎಂಬುದು ಅಪೊಸ್ತಲರಿಂದ ಮುಂಚೆಯೇ ಕೊಡಲ್ಪಟ್ಟ ಅರ್ಹತೆಗಳನ್ನು ಆತನು ಹೊಂದಿದ್ದನು ಎಂದು ನಮಗೆ ತಿಳಿಸುತ್ತದೆ (ಸೂಚನೆಯ ಮೂಲಕ ಇತರ ಆರೂ ಜನರೂ ಕೂಡಾ ಈ ಅರ್ಹತೆಗಳನ್ನು ಹೊಂದಿದ್ದರು ಎಂದು ಸೂಚಿಸುತ್ತದೆ). [16]ಸಂಪ್ರದಾಯದ ಪ್ರಕಾರ, ಪ್ರೊಖೋರನು ಅಂತಿಯೋಕ್ಯದಲ್ಲಿ ಹತಸಾಕ್ಷಿಯಾದನು. [17]ನಿಕೊಲಾಯನ ಪಂಗಡವು (ಪ್ರಕಟಣೆ 2:6, 15ರಲ್ಲಿ ದೂಷಣೆಗೆ ಒಳಗಾದ) ಈ ನಿಕೊಲೋಸನ ಜೊತೆಗೆ ಮೊದಲಿಂದಲೂ ಕೂಡ ಇದ್ದಿತು ಎಂದು ಹೇಳಿಕೊಳ್ಳುತ್ತದೆ. ಬಹುಶಃ ಅವರ ಪಾಷಂಡಿತನದಿಂದ ಈ ಹೆಸರು ಈ ಪಂಗಡಕ್ಕೆ ಕೊಡಲಾಯಿತು. [18]"ನಿಕೊಲೋಸನು ಅಂತಿಯೋಕ್ಯದವನು" ಎಂದು ಲೂಕನು ಹೇಳಿದುದರಿಂದ ಮತ್ತು ಉಳಿದ ಆರುಜನರಿಗೆ ಹೋಲಿಕೆಯಾಗುವ ಯಾವುದೇ ಮಾಹಿತಿಯು ದೊರೆಯದರಿಂದ, ಅಲ್ಲಿ ಬಹುಶಃ ಆ ಪದಗುಚ್ಛಕ್ಕೆ ಮಹ್ಹತ್ವವು ಬಂದಿದೆ. ಬಹುಶಃ ಲೂಕನು ಅಂತಿಯೋಕ್ಯವನ್ನು ಸಿರಿಯಾದಲ್ಲಿ ಪರಿಚಯಿಸುತ್ತಿದ್ದಾನೆ, ಇದು ಪೌಲನ ಸುವಾರ್ತಾ ಸೇವೆಯ ಕಾರ್ಯದ ಮೂಲ ಕೇಂದ್ರವಾಯಿತು. (ಸಂಪ್ರದಾಯವು ಸಹ ಹೇಳುವುದೇನೆಂದರೆ ಲೂಕನ ತಾಯಿಯ ಊರು ಅಂತಿಯೋಕ್ಯವಾಗಿತು.) [19]ಏಳು ಗ್ರೀಕ್ ಹೆಸರುಗಳು ತಂತಾನೇ ಅಲ್ಲಿರುವವರೆಲ್ಲರೂ ಗ್ರೀಕ ಭಾಷೆ

ಮಾತನಾಡುವ ಯೆಹೂದ್ಯರು ಎಂಬುದನ್ನು ಸಾಧಿಸುವುದಿಲ್ಲ; ಕೆಲ ಅಪೊಸ್ತಲರೂ ಕೂಡಾ ಗ್ರೀಕ್ ಹೆಸರಿನವರಾಗಿದ್ದರು (ಅಂದ್ರೇಯ, ಫಿಲಿಪ್ಪ). ಹೇಗೂ, ಫಿಲಿಪ್ಪ ಎಂಬ ಹೆಸರಿನಂತೆಯೇ, ಹೆಚ್ಚಿನ ಹೆಸರುಗಳು ಸಾಮಾನ್ಯವಾದ ಗ್ರೀಕ ಹೆಸರುಗಳೇ ಆಗಿದ್ದು ಪಾಲಿಸ್ಟೇನನ ಯೆಹೂದಿಗಳಿಗೆ ಯೋಗ್ಯವಾದವುಗಳು ಆಗಿವೆ. ಈ ಏಳು ಜನ ನಾಯಕರುಗಳು ಬಹುಶಃ ಯೆರೂಸಲೇಮಿನ ಸಭೆಯಲ್ಲಿನ ಗ್ರೀಕ ಭಾಷಾಪಂಗಡಕ್ಕೆ ಸೆರಿದವರು ಆಗಿರಬಹುದು. [20]Lewis Foster, comments on Acts, *The NIV Study Bible* (Grand Rapids, Mich.: Zondervan Publishing House, 1985), 1654.

[21]ಇಬ್ರಿಯ ಯೆಹೂದಿಗಳು ಬಹುಸಂಖ್ಯಾತರಾಗಿದ್ದರು. [22]ಆರಿಸಲ್ಪಟ್ಟ ಏಳು ಜನರು ಕೇವಲ ಗ್ರೀಕ ಭಾಷೆಯ ವಿಧವೆಯರನ್ನು ನೋಡಿಕೊಳ್ಳುವ ಸಾಧ್ಯತೆಯು ಬಹುವಾಗಿತ್ತು. ಅವರು ತಮ್ಮ ಸ್ಥಾನವು ಸಂದರ್ಭಕ್ಕೆ ಪೂರಕವಾಗಿದ್ದು ಅವರು ಆಹಾರ ವಿತರಣೆಯ (ವಿಧವೆಯರನ್ನು ನೋಡಿಕೊಳ್ಳುವುದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ಒಳಗೊಂಡಂತದ್ದು) ಸಂಪೂರ್ಣ ಕೆಲಸದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗಿತ್ತು. [23]ಸಂಪೂರ್ಣ ಸಭೆಯು ಏಳು ಜನರ ಮೇಲೆ ತಮ್ಮ ಕೈಗಳನ್ನು ಇಡುವ ಸಾಧ್ಯತೆಯು ಇತ್ತು, ಆದರೆ ಪೂರ್ವಭಾವಿಯಾದ "ಅವರು" ಎಂಬುದು "ಅಪೊಸ್ತಲರನ್ನು" ಸೂಚಿಸುವಂತದ್ದು ಆಗಿದೆ. [24]ಅಪೊಸ್ತಲರ ಕೃತ್ಯಗಳು 14:21-23ನ್ನು ಮುಂದಿನ ಪುಸ್ತಕದಲ್ಲಿ ಚರ್ಚಿಸಲಾಗುವದು. [25]"ಕೈಯನ್ನು ಇಡು" ಎಂಬ ಪದದ ಅರ್ಥವು "ಸೆರೆಹಿಡಿ" (4:3) ಎಂಬ ಅರ್ಥವೂ ಆಗಿದೆ. ಮುಂದೆ, ಹಳೆಯ ಒಡಂಬಡಿಕೆಯಲ್ಲಿ ಪ್ರಾಣಿಗಳ ಮೇಲೆ ಕೈಯಿಡುವುದು ಎಂದರೆ ಗುರುತಿಸುವದು ಎಂದರ್ಥವನ್ನು ಕೊಡುತ್ತದೆ (ಯಾಜಕಕಾಂಡ 1:4). [26]ಸ್ವಲ್ಪ ಸಮಯದ ನಂತರ, ಸ್ತೆಫನು ಮತ್ತು ಫಿಲಿಪ್ಪರು ಹೊಂದಿದಂತಹ ಅದ್ಭುತೀಯ ಶಕ್ತಿಯನ್ನು ನಿರೂಪಿಸದರು (6:8; 8:6-8). ನಾವು ಉಳಿದ ಐವರ ಬಗೆಗೆ ಏನನ್ನು ಹೇಳಿತ್ತಿಲ್ಲ. ಒಂದು ವೇಳೆ ಸ್ತೇಫನ ಮತ್ತು ಫಿಲಿಪ್ಪರು ಅದ್ಭುತೀಯ ವರಗಳನ್ನು ಪಡೆಯದಿದ್ದರೆ ಆ ಸಮಯದಲಿನ್ಲ ಸಭೆಯಲ್ಲಿ ವಿಶೇಷ ಸೇವಕರಾಗಿ ಇಡಲ್ಪಡುತ್ತಿದ್ದರು, ನಂತರದ ದಿನಗಳಲ್ಲಿ ಅಪೊಸ್ತಲರು ತಮ್ಮ ಕೈಗಳನ್ನು ಅವರ ಮೇಲೆ ಇಡುತ್ತಿದ್ದರು. [27]ಒಬ್ಬನು ತನ್ನ ಉತ್ತರಾಧಿಕಾರಿಯೊಂದಿಗೆ ಅದೇ ತರನಾದ ಶಕ್ತಿಯನ್ನು ಪಡೆಯುವದು ಸತ್ಯವೇದದ ಸಂಪ್ರದಾಯವಾಗಿತ್ತು; ದೇವರು ತನ್ನ ಉತ್ತರಾಧಿಕಾರಿಯೊಂದಿಗೆ ಇದ್ದ ಹಾಗೇ ಈಗಲೂ ಕೂಡಾ ಇರುತ್ತಾನೆ ಎಂದು ತೋರಿಸುವುದೂ ಕೂಡಾ ಇದಾಗಿದೆ. ಬಹುಶಃ ದೇವರು ಹನ್ನೆರಡು ಜನ ರೊಂದಿಗೆ ಇದ್ದ ಹಾಗೆ ಈ ಏಳು ಜನರೊಡನೆ ಇದ್ದು ವಿಶೇಷವಾದ ಅದ್ಭುತೀಯ ಶಕ್ತಿಯನ್ನು ತೋರಿಸಿದನು. [28]USನಲ್ಲಿ ಕೆಲಸಾರಿ ಬೆಂಬಲವನ್ನು ಮಾನವರ ಕೈಕುಲುಕುವುದರ ಮೂಲಕ ಅಥವಾ ಬೆನ್ನು ಚಪ್ಪರಿಸುವ ಮೂಲಕ ತೋರಿಸುತ್ತಾರೆ. ನಾನು ಸಭೆಗೆ ಅವರ ಹೊಸ ನಾಯಕರುಗಳ ಮೇಲೆ "ಕೈಗಳನ್ನು ಇಡುವುದರ" ಮೂಲಕ ಕೈಕುಲುಕುವುದರ ಅಥವಾ ಬೆನ್ನನ್ನು ಚಪ್ಪರಿಸುವ ಮೂಲಕ ಬೆಂಬಲವನ್ನು ತೋರಿಸಿ ಸದಾ ಪ್ರೋತ್ಸಾಹಿಸುತ್ತಿರುತ್ತೇನೆ. [29]ಕೆಲಸಾರಿ ಇದು ಹಿರಿಯರ ದೋಷವೂ, ಅವರ ನಾಯಕತ್ವದ ಶೈಲಿಯ ಫಲಿತಾಂಶವೂ ಆಗಿರುತ್ತದೆ. ಕೆಲಸಾರಿ ಇದು ಡಿಕನ್ನರ ದೋಷವಾಗಿರುತ್ತದೆ; ಅವರು ತಮ್ಮ ಕಾರ್ಯಗಳ ಪೂರ್ಣ ಜವಾಬ್ದಾರಿಯನ್ನು ಒಪ್ಪಿಕೊಳ್ಳುವವರಾಗಿರುವುದಿಲ್ಲ. [30]ಆ ಸಮಯದಲ್ಲಿ ಲೆಕ್ಕಹಾಕಿದ ಪ್ರಕಾರ, ಅಲ್ಲಿ ಹದಿನೆಂಟು ಸಾವಿರ ಯಾಜಕರು ಮತ್ತು ಲೇವಿಯರೂ ಇದ್ದರು. ಅವರಲ್ಲಿ ಕೆಲವರು ಪ್ರಾಮಣಿಕರೂ, ದೇವರಲ್ಲಿ ಭಯಭಕ್ತಿಯುಳ್ಳವರೂ ಆಗಿ ಸ್ಥಾನ ಕಳೆದುಕೊಂಡ ಜೆಕರೀಯ, ಸ್ನಾನಿಕನಾದ ಯೋಹಾನನ ತಂದೆಯಂತವರೂ ಇದ್ದರು (ಲೂಕ 1:5, 6). ಅಲ್ಲೊಂದು ಊಹೆಯಿಂದ, ಪರಿವರ್ತಿತರಾದ ಯಾಜಕರಿಗೆ ದೇವಾಲಯದಲ್ಲಿ ಸೇವೆಯನ್ನು ಮುಂದುವರೆಸುವಂತದ್ದು ಇತ್ತೋ ಇಲ್ಲವೊ ತಿಳಿಯದು. ಅವರು ಹಾಗೆ ಮಾಡಿದರು ಎಂಬುದಕ್ಕೆ ಯಾವ ಕಾರಣವೂ ನನಗೆ ತಿಳಿಯದು. ಒಂದು ವೇಳೆ ಹಾಗೆ ಮಾಡಿದ್ದಾದರೆ ಅವರು "ಅತಿ ಶ್ರೇಷ್ಟರಾದವರು ಮಾನವನ ಕೈಗಳಿಂದ ಮಾಡಿದ ಮನೆಗಳಲ್ಲಿ ಅವತರಿಸುವುದಿಲ್ಲ" ಎಂಬ ಸಾಮಾನ್ಯ ಹೇಳಿಕೆಯೊಂದಿಗೆ ಹೀಗೆ ಅವರು ಸಂಘರ್ಷವನ್ನು ಮಾಡಿದಂತಾಗುತ್ತಿರಲಿಲ್ಲ (ಹೋಲಿಸು 7:48). ಮುಂದೆ, ಅವರು ಹೀಗೆ ಮಾಡಿದ್ದಾದರೆ, ಕೈಸ್ತರು ಯೆರೂಸಲೇಮಿನಿಂದ ಚದುರಿಸಲ್ಪಟ್ಟಾಗ (8:1-4), ಅವರು ತಮ್ಮ ಕೆಲಸ ಮತ್ತು ಕ್ರಿಸ್ತನಿಗಾಗಿ ನಿಲ್ಲುವುದರ ಮಧ್ಯೆ ಆಯ್ಕೆಯನ್ನು ಮಾಡಿಕೊಳ್ಳಬೇಕಾಗಿ ಬಂತು.

[31]ಸಾರಂಶದ ಹೇಳಿಕೆಯು ಜನರು ಕೇವಲ ಯೇಸುವನ್ನು ನಂಬುವುದರ ಮೂಲಕ ಕ್ರೈಸ್ತರಾಗಲಿಲ್ಲ ಎಂದು ತೋರಿಸುತ್ತದೆ. ವಿಧೇಯತೆಯು ಅವರ ಪ್ರತಿಕ್ರಿಯೆಯ ಭಾಗದ ಪ್ರಮುಖ ಅಂಶವಾಗಿತ್ತು. "ವಿಧೆಯತೆಯು ನಂಬಿಕೆಯಿಂದ ಕೂಡಿರುವುದೇ ಆಗಿದೆ" ಎಂದು ಹೇಳುವ ಮೂಲಕ ಕೆಲವರು ಇದರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹೇಗೋ, ಮೂಲ ಭಾಗದಲ್ಲಿ "ಯಾಜಕರು ನಂಬಿಕೆಗೆ ವಿಧೇಯರಾದರು" ಎಂದಿದೆ. ನಂಬಿಕೆ ಎಂಬ ಪದದ ಹಿಂದೆ ಇಂಗ್ಲೀಷನಲ್ಲಿರುವ "the" ಪದವು ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವ (ನೋಡಿರಿ ಯೂದ 3) ಸಾಮಾನ್ಯವಾಗಿ ಯೇಸು ಕ್ರಿಸ್ತನನ್ನು ಕೇಂದ್ರಿಕೃತವಾಗಿ ಇಟ್ಟುಕೊಂಡು ಬೋಧಿಸುತ್ತಿರುವ ಸಭೆಯನ್ನು ಸೂಚಿಸುವುದಾಗಿದೆ.

ಯಾಜಕರು ಯೇಸುವಿಗೆ ಅವಶ್ಯವಿರುವದೆಲ್ಲವನ್ನೂ, ದೀಕ್ಷಾಸ್ನಾನವಾಗುವುದನ್ನೂ ಒಳಗೊಂಡು ಎಲ್ಲವನ್ನೂ ಮಾಡಲು ಬಯಸುವವರಾಗಿದ್ದರು (2:38).